

ಇಲ್ಲವೋ ಎನ್ನುವ ಕುತೂಹಲ ಕೂಡಾ ಆಗುತ್ತಿತ್ತು.

ಪ್ರವಾಸದ ಹಿಂದಿನ ದಿನ, ಸ್ಮಿತಾ ಆಂಟಿಯ ಫೋನ್‌ನಲ್ಲಿ ಸೇವ್ ಆಗದೆ ಇರುವ ಶಾರ್ವಿಯ ಅಜ್ಜನ ನಂಬರ್‌ನಿಂದ, ಇಂಟರ್‌ನೆಟ್ ಆಫೀಸ್‌ನವರು ಕಳಿಸುವಂತೆ 'ತಾಂತ್ರಿಕ ಕಾರಣಗಳಿಂದ ಮುಂದಿನ ಎರಡು ದಿನ ಇಂಟರ್‌ನೆಟ್ ಸೌಲಭ್ಯ ಇರುವುದಿಲ್ಲ, ತೊಂದರೆಗಾಗಿ ವಿಷಾದಿಸುತ್ತೇವೆ' ಎಂಬ ಮೆಸೇಜನ್ನು ಕಳುಹಿಸಿಬಿಟ್ಟರು.

ಪ್ರವಾಸದ ದಿನ ಬೆಳಿಗ್ಗೆ ಶಾರ್ವಿ ಎಲ್ಲರಿಗಿಂತ ಮೊದಲೇ ಎದ್ದು ರೆಡಿಯಾಗಿದ್ದಳು. ಶಾರ್ವಿಯನ್ನು ಶಾಲೆಗೆ ಬಿಡಲು ಅಪ್ಪ, ಅಮ್ಮನ ಜೊತೆ ಅಣ್ಣನೂ ಹೋಗಿದ್ದ. ಅಲ್ಲಿ ಆಗಲೇ ಬ್ಯಾಗನ್ನು ಬೆನ್ನಿಗೇರಿಸಿಕೊಂಡು ರೆಡಿಯಾಗಿ ನಿಂತಿದ್ದ ಸೂರ್ಯನನ್ನು ನೋಡಿ ಇಬ್ಬರಿಗೂ ಒಳಗೊಳಗೇ ಹೇಳಲಾಗದಷ್ಟು ಖುಷಿ. ಅಣ್ಣನಿಗೆ ಥ್ಯಾಂಕ್ಸ್ ಹೇಳಲು ನಗುತ್ತಾ ಹತ್ತಿರ ಬಂದಳು ಶಾರ್ವಿ. ಬೆಳಗ್ಗೆಯಷ್ಟೇ ಅವನ ಬಳಿ ಜಗಳಾಡಿ ತೆಗೆದುಕೊಂಡು ಬಂದಿದ್ದ ಅವನ ಕಪ್ಪು ಕನ್ನಡಕವನ್ನು ವಾಪಸ್ ಅವನ ಮೂಗಿನ ಮೇಲೇರಿಸಿ, ಸೂರ್ಯನ ಕೈ ಹಿಡಿದುಕೊಂಡು ಕಾದು ನಿಂತಿದ್ದ ಬಸ್ ಏರಿದಳು.

●